


ವಿಜಯ್ ನೀಲಕಂಠಯ್ಯ

ಅವರಿಗೆ ಆಸಕ್ತಿ ಇದೆ ಎಂದರ್ಥ. ಚಟುವಟಿಕೆಯಲ್ಲಿ ತೊಡಗಿಸದೇ ಎಂಜಾಯ್ ಮಾಡುತ್ತಾರೊ ಇಲ್ಲವೋ ಎಂದು ಹೇಗೆ ತಿಳಿಯುತ್ತದೆ? ಊಟ ಮಾಡಿದರಷ್ಟೇ ಅಲ್ಲವೆ ಪದಾರ್ಥದ ರುಚಿ ತಿಳಿಯೋದು. ಹಾಗೆ ಚಟುವಟಿಕೆಯಲ್ಲಿ ತೊಡಗಿಸಿದರಷ್ಟೇ ಮಕ್ಕಳ ಆಸಕ್ತಿ ತಿಳಿಯುತ್ತದೆ. ಚಿಕ್ಕ ವಯಸ್ಸಿಗೆ ಸ್ವಿಮಿಂಗ್ ತರಗತಿಗೆ ಸೇರಿಕೊಂಡವರು ದೊಡ್ಡವರಿಗಿಂತ ಬೇಗನೆ ಕಲಿಯುತ್ತಾರೆ. ಇದನ್ನು ಕಲಿತವರಲ್ಲಿ ಮೋಟಾರ್ ಸ್ಕಿಲ್ಸ್, ಸಾಮಾಜಿಕ ಕೌಶಲಗಳೆಲ್ಲವೂ ಬೇಗನೆ ಅಭಿವೃದ್ಧಿಯಾಗುತ್ತವೆ. ಏಕಾಗ್ರತೆಯೂ ಹೆಚ್ಚುತ್ತದೆ. ಆರೋಗ್ಯವೂ ಚೆನ್ನಾಗಿರುತ್ತದೆ. ಮಧುಮೇಹದ ತೀವ್ರ ಸಮಸ್ಯೆಯಿಂದ ಬಳಲುತ್ತಿದ್ದವರೂ ಸ್ವಿಮಿಂಗ್‌ನಿಂದ ಆರೋಗ್ಯ ಸುಧಾರಿಸಿಕೊಂಡ ಉದಾರಣೆಗಳಿವೆ' ಎನ್ನುತ್ತಾರೆ ನೀಲಕಂಠಯ್ಯ.

ಜನಪ್ರಿಯ ಕೊಳಲು ವಾದಕ ಪ್ರವೀಣ್ ಗೋಡ್ಖಿಂಡಿ ಪ್ರತಿದಿನವೂ ಹೀಗೆ ಮಹತ್ವಾಕಾಂಕ್ಷೆ ಹೊತ್ತ ಪೋಷಕರು ಮತ್ತು ಅದರ ಭಾರ ಹೊತ್ತು ನಲುಗುವ ಮಕ್ಕಳನ್ನು ನೋಡುತ್ತಲೇ ಇರುವವರು. ಅವರಲ್ಲಿ ಈ ಬಗ್ಗೆ ಪ್ರಶ್ನಿಸಿದರೆ ಅವರು ಪಾಲಕರು ಮತ್ತು ಮಕ್ಕಳ ಹೊರತಾದ ಇನ್ನೊಂದು ತುದಿಯತ್ತ ಗಮನಸೆಳೆಯುತ್ತಾರೆ. ಗುರುವಿನ ಜವಾಬ್ದಾರಿಯೂ ಹಿರಿದು ಎನ್ನುವುದು ಅವರ ಅಭಿಪ್ರಾಯ.

'ಮಕ್ಕಳ ಭವಿಷ್ಯ ರೂಪಿಸುವಲ್ಲಿ ಗುರುವಿನ ಪಾತ್ರ ಬಹುಮುಖ್ಯ. ಆದರೆ ಮಕ್ಕಳ ಆಸಕ್ತಿಯನ್ನು ಗುರುತಿಸಿ ಪ್ರೋತ್ಸಾಹಿಸುವಷ್ಟು ವ್ಯವಧಾನ ಗುರುಗಳಲ್ಲಿ ಕಡಿಮೆ ಆಗುತ್ತಿದೆ. ತರಗತಿಗೆ ಸೇರಿಸಿಕೊಳ್ಳುವುದಕ್ಕೂ ಮುಂಚೆ ಮಗುವಿನ ಆಸಕ್ತಿ ಹೇಗಿದೆ ಎಂದು ಪರೀಕ್ಷಿಸುವುದು ಒಳಿತು. ನಾನು ತಿಳಿದಂತೆ ಶಾಸ್ತ್ರೀಯ ಸಂಗೀತ ಹೇಳಿಕೊಡುವ ಕೆಲವರು ಮಗುವಿನ ಆಸಕ್ತಿಯನ್ನು ಪರೀಕ್ಷಿಸಿ ತರಗತಿಗೆ ಸೇರಿಸಿಕೊಳ್ಳುವುದಿದೆ. ಆಸಕ್ತಿಯಿಂದ ಬಂದು ಮಕ್ಕಳನ್ನು ಸೇರಿಸಿದಾಗ ಎಷ್ಟೋ ಸಂದರ್ಭದಲ್ಲಿ ಹೀಗೆ ಆಯ್ಕೆ ಮಾಡುವುದೂ ಕಷ್ಟ ಎನ್ನಿ. ಹೀಗಾಗಿ ಪ್ರತಿಭಾನ್ವಿತರನ್ನು ಆಯ್ದು ವಿಶೇಷ ತರಬೇತಿ ನೀಡುವ ಕೆಲಸವನ್ನಾದರೂ ಗುರುಗಳು ಮಾಡಬಹುದು. ಇಲ್ಲವಾದರೆ ಗುಂಪಿನಲ್ಲಿ ಗೋವಿಂದ ಆಗುವ ಸಂದರ್ಭಗಳೇ ಹೆಚ್ಚು' ಎನ್ನುತ್ತಾರೆ ಕೊಳಲು ವಿದ್ವಾಂಸ ಪ್ರವೀಣ್ ಗೋಡ್ಖಿಂಡಿ.

## ಸ್ಪರ್ಧೆಯೂ ಬೇಕು; ಸ್ವತಂತ್ರ ವಾತಾವರಣವೂ ಬೇಕು

ಶಿಕ್ಷಣ ಮತ್ತು ಪಠ್ಯೇತರ ಚಟುವಟಿಕೆಗಳು ಈ ಎರಡೂ ಮಕ್ಕಳ ಭವಿಷ್ಯಕ್ಕೆ ಭದ್ರ ಬುನಾದಿ ಹಾಕಿಕೊಡುತ್ತವೆ. ತರಗತಿಯಲ್ಲಿ ಕೂರುವುದು, ಶಿಕ್ಷಕರಿಂದ ಪಾಠ ಕಲಿಯುವುದು, ಅವರು ನೀಡುವ ಸೂಚನೆಗಳನ್ನು ಅನುಸರಿಸುವುದು, ಎಲ್ಲವೂ ವ್ಯವಸ್ಥಿತ ಬದುಕಿಗೆ ಬೇಕು ನಿಜ. ಈ ವಾತಾವರಣ ರಚನಾತ್ಮಕ ಪರಿಸರ ಎಂದೆನಿಸಿಕೊಳ್ಳುತ್ತದೆ. ಅಂದರೆ ಇಲ್ಲಿ ಎಲ್ಲವೂ ವ್ಯವಸ್ಥಿತವಾಗಿ ನಡೆಯುತ್ತದೆ. ಈ ವ್ಯವಸ್ಥೆಯ ಆಚೆಗೂ ಒಂದು ಜಗತ್ತಿದೆ, ಅಲ್ಲಿಯೂ ಮಕ್ಕಳಿಗೆ ಕಲಿಯುವುದು ಸಾಕಷ್ಟಿರುತ್ತದೆ ಎಂಬುದನ್ನು ನಾವು ಮರೆಯುತ್ತಿದ್ದೇವೆ. ಶಾಲೆ, ಶಾಲೆಯಿಂದ ಬಂದ ನಂತರ ಹೋಂವರ್ಕ್, ನಂತರ ಟ್ಯೂಶನ್ ತರಗತಿಗಳು, ಇಲ್ಲವೇ ಯಾವ್ಯಾವುದೋ ತರಗತಿಗಳಿಗೆ ಸೇರಿಸುವುದರ ಮೂಲಕ ಮಕ್ಕಳನ್ನು ರೂಢಿಗತ ವ್ಯವಸ್ಥೆಯ ಪಂಜರದಲ್ಲಿ ದೂಡಲು ಪೋಷಕರೆಲ್ಲ ಮುಗಿಬೀಳುತ್ತಿದ್ದೇವೆ.

ಎಲ್ಲದರಲ್ಲಿಯೂ ಅವರನ್ನು ಜಾಣರನ್ನಾಗಿಸುವ ನಮ್ಮ ಹಪಹಪಿಯ ನೆಪದಲ್ಲಿ ಮಕ್ಕಳ ಸ್ವಾತಂತ್ರ್ಯವನ್ನು ಕಸಿದುಕೊಳ್ಳುತ್ತಿದ್ದೇವೆ. ಅವರಿಗೆ ಸ್ವಂತಕ್ಕಿಷ್ಟು ಸಮಯವನ್ನೇ ನೀಡುತ್ತಿಲ್ಲ. ರೂಢಿಗತ ವ್ಯವಸ್ಥೆಯಲ್ಲಿ ನಿಯಮಾನುಸಾರ ಬೆಳೆಯುವ ಮಕ್ಕಳು ಸ್ವತಂತ್ರವಾಗಿ ಯೋಚಿಸುವ ಸಾಮರ್ಥ್ಯ

